

ಲಪಟಾಯಿಸಿ ಎಲ್ಲರೊಂದಿಗೆ ಯಥೇಚ್ಛವಾಗಿ ತಿನ್ನುತ್ತಿದ್ದುದು ಟೀಮ್‌ವರ್ಕ್‌ನಲ್ಲಿ ಮಾಡುತ್ತಿದ್ದ ಸ್ಮಾರ್ಟ್‌ವರ್ಕ್ ಎನಿಸದಿರುತ್ತದೆಯೇ? ಅಪ್ರತಿಮ ವೀರರಾದ ಭೀಷ್ಮರೆದುರು ಶಿಖಂಡಿಯನ್ನು ನಿಲ್ಲಿಸಿ ಅವರಿಂದ ಶಸ್ತ್ರತ್ಯಾಗ ಮಾಡಿಸಿದ್ದು, ಹನುಮಂತನ ಲಂಕಾದಹನ, ಹಿರಣ್ಯಕಶಿಪುವಿನ ಸಂಹಾರ... ಶಕ್ತಿಯಿಂದಷ್ಟೇ ಸಾಧ್ಯವಾಗದ್ದನ್ನು ಯುಕ್ತಿಯಿಂದ ಸಾಧಿಸಬಹುದು ಎನ್ನುವುದನ್ನೂ ಸ್ಮಾರ್ಟ್‌ವರ್ಕ್ ಎನ್ನಬಹುದಲ್ಲವೇ?

ಚರಿತ್ರೆಯ ಪುಟಗಳಲ್ಲಿಯೂ ಬುದ್ಧಿಯ ಗೆಲುವಿನ ಸ್ಮಾರ್ಟ್‌ವರ್ಕ್ ಘಟನೆಗಳನ್ನು ಕಾಣಬಹುದು. ಇತಿಹಾಸದ ಮೊದಲ ಮ್ಯಾನೇಜ್ಮೆಂಟ್ ಗುರು ಎನಿಸಿಕೊಳ್ಳುವ ಚಾಣಕ್ಯರ, 'ರಾಜ್ಯ ಸ್ಥಾಪನೆ ಮಾಡೋದು ಅಂದ್ರೆ ಯುದ್ಧ ಮಾತ್ರ ಅಲ್ಲ, ಬಲಕ್ಕಿಂತ ಬುದ್ಧಿ ಮುಖ್ಯ' ಎನ್ನುವ ಮಾತಿನಂತೆ ಉತ್ತಮ ಗುಪ್ತಚರ ವ್ಯವಸ್ಥೆ, ಆರ್ಥಿಕ ನಿಯಂತ್ರಣ, ತಂತ್ರಯುಕ್ತ ರಾಜಕೀಯಗಳಿಂದ ಚಂದ್ರಗುಪ್ತ ಮೌರ್ಯ ಕಡಿಮೆ ಯುದ್ಧಗಳನ್ನು ಮಾಡಿ ಬಹುದೊಡ್ಡ ಸಾಮ್ರಾಜ್ಯವನ್ನೇ ಸ್ಥಾಪಿಸಿದ್ದು!

'ಗೋರ್ದಿಯನ್ ಗಂಟನ್ನು ತೆರೆದವನು ವಿಶ್ವ ವಿಜೇತ' ಎಂಬ ನಿಯಮದಂತೆ ಜಯಿಸಲು ಗಂಟೆಗಟ್ಟಲೆ ಕುಳಿತು ಗಂಟನ್ನು ಬಿಚ್ಚಬೇಕಾಗಿತ್ತು. ಆದರೆ ಅಲೆಕ್ಸಾಂಡರ್ ಶಾರ್ಟ್‌ಕಟ್ ಅನುಸರಿಸಿ ಮಾಡಿದ ಸ್ಮಾರ್ಟ್‌ವರ್ಕೆಂದರೆ ಕತ್ತಿಯಿಂದ ಒಂದೇ ಹೊಡೆತದಲ್ಲಿ ಗಂಟನ್ನು ಓಪನ್ ಮಾಡಿದ್ದು!

ಬೃಹತ್ತಾದ ಮೊಘಲರ ಸೇನೆಯ ಎದುರು ಚಿಕ್ಕ ಸೈನ್ಯ ಹೊಂದಿದ್ದ ಶಿವಾಜಿ ಮಹಾರಾಜರ ಗೆರಿಲ್ಲಾ ಯುದ್ಧ... ಇವುಗಳಿಂದ ತಿಳಿದುಬರುವುದು ಬಲಾಢ್ಯರಷ್ಟೇ ಅಲ್ಲ ಬುದ್ಧಿಶಾಲಿಗಳೂ ಇತಿಹಾಸ ಬರೆಯುತ್ತಾರೆ ಎನ್ನುವ ಸ್ಮಾರ್ಟ್‌ವರ್ಕ್‌ನ ಗೆಲುವಲ್ಲವೇ?

ಇಂತಿಪ್ಪ ವಿದ್ಯಮಾನಗಳಲ್ಲಿ ಪ್ರಾಚೀನ ಮತ್ತು ನವೀನಗಳ ನಡುವಿನ ಸೇತುವಾದ ನನ್ನಂಥಾ ಬೇಬಿ ಬೂಮರ್ಸ್ ಆದ ನಾವೂ ಸ್ಮಾರ್ಟ್‌ವರ್ಕನ್ನು ಅನುಸರಿಸುತ್ತಾ ಎಕ್ಸ್, ವೈ, ಝಡ್ ಹಾಗೂ ಆಲ್ಫ ಜನರೇಷನ್ನೊಂದಿಗೆ ಕೈಜೋಡಿಸಿ ಸೌಹಾರ್ದಯುತ ಬಾಳನ್ನು ನಮ್ಮದಾಗಿಸಿಕೊಳ್ಳೋಣ, ಅಲ್ಲವೇ? ●